# ಎನ್‌ಐಟಿಕೆ: ಕಿರು ಉದ್ಯಮ ಕಾರ್ಯಾಗಾರ, ಪ್ರದರ್ಶನ



**ಸುರತ್ಕಲ್, ಎ. 6:** ಕಿರು ಉದ್ಯಮ ಸ್ಥಾಪನೆಗೆ ರಾಜ್ಯ ಮತ್ತು ಕೇಂದ್ರ ಸರಕಾರ ಪ್ರೋತ್ಸಾಹ ನೀಡುತ್ತಿದ್ದು, ಸ್ವೋದ್ಯೋಗದ ಆಸಕ್ತಿ ಇರುವ ಯುವ ಸಮೂಹವು ಉದ್ಯಮದಲ್ಲಿ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ಸುರತ್ಕಲ್ ಎನ್‌ಐಟಿಕೆ ಪ್ರದರ್ಶನ ಆಯೋಜಿಸಿತ್ತು.

ಎಂಎಸ್‌ಎಂಇ ಸ್ಥಳೀಯ ಸಾಂಪ್ರದಾಯಿಕ ಕೈಯಿಂದ ತಯಾರಿ ಸಿದ ಉತ್ಪನ್ನಗಳಾದಮಂಗಳೂರಿನಗೊಂಬೆಗಳು, ತೆಂಗಿನ ಚಿಪ್ಪು ಕಲಾಕೃತಿಗಳು, ಡ್ರಿಫ್ಟ್ ವುಡ್, ಚೆನ್ನ ಪಟ್ಟಣದ ಗೊಂಬೆಗಳು, ಕೃತಕ ಅಲಂಕಾರಿಕ ಹೂವುಗಳು ಮತ್ತು ಎಲೆಗಳ ಕಲೆ, ಕೈಯಿಂದ ಮಾಡಿದ ಕರಕುಶಲ ಆಭರಣಗಳು, ನೈಸರ್ಗಿಕ ಆಹಾರ ಮತ್ತು ಸಾಬೂನು ಉತ್ಪನ್ನಗಳು, ಟ್ರೈನಿಂಗ್ ಕಿಟ್‌ಗಳು ಮತ್ತು ಅನೇಕ ಪರಿಸರ ಸ್ನೇಹಿ ಉತ್ಪನ್ನಗಳ ಪ್ರದರ್ಶನವನ್ನು ಎನ್‌ಐಟಿಕೆ ಕ್ಯಾಂಪಸ್‌ನಲ್ಲಿ ಗಮನ ಸೆಳೆದವರು.

ಕಿರು ಉದ್ಯಮ ಸಚಿವಾಲಯ, ಸೆಂಟರ್ ಫಾರ್ ಸಿಸ್ಟಮ್ ಡಿಸೈನ್ಡ್ ಎಂಎಸ್‌ಎಂಇ ಡಿಎಫ್‌ಒ ಮಂಗಳೂರು, ಎನ್‌ಐಟಿಕೆ ಸಹಯೋಗದಲ್ಲಿ ಎರಡು ದಿನಗಳ ಕಾರ್ಯಾಗಾರವು ನಡೆಯಿತು. ಎನ್‌ಐಟಿಕೆ ಪ್ರಭಾರ ನಿರ್ದೇಶಕ ಪ್ರೊ| ಜಿ.ಸಿ ಮೋಹನ್ ಉದ್ಘಾಟಿಸಿದರು. ಪ್ರೊ|ಎಸ್.ಎಂ ಕುಲಕರ್ಣಿ, ಪ್ರೊ| ಕೆ.ವಿ ಗಂಗಾಧರನ್, ಎಂಎಸ್‌ಎಂಇ ಸಹಾಯಕ ನಿರ್ದೇಶಕ ಸುಂದರ್ ಶೆಟ್ಟಿಗಾರ್, ಕಾರ್ಯಾಗಾರದ ಸಂಯೋಜಕರಾದ ಡಾ| ಪೃಥ್ವಿರಾಜ್, ಡಾ| ಬಿಜುನ, ವಿಪ್ರೋದ ಯತಿರಾಜ್ ಕಸಲ್, ನಿತಿನ್ ಶ್ರೀನಿವಾಸ್ ಮತ್ತಿತರರು ಸಂಪನ್ಮೂಲ ವ್ಯಕ್ತಿಗಳಾಗಿ ಉಪಯುಕ್ತ ಮಾಹಿತಿ ನೀಡಿದರು. 500ಕ್ಕೂ ಮಿಕ್ಕಿ ಆಸಕ್ತರು, ಕಿರು ಉದ್ಯಮದ ಉದ್ಯಮಿಗಳು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

Udayavani, Date: 07/04/23 p, no - 04